ಅ) ಗುಲ್ಬರ್ಗ ವಿಭಾಗವು ಶಿಕ್ಷಣ ಹಾಗೂ ಉದ್ಯೋಗಗಳಲ್ಲಿ ಬಹಳ ಹಿಂದುಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಗುಲ್ಬರ್ಗ ವಿಭಾಗೀಯ ಕಛೇರಿಯನ್ನು ಎಂದಿನಿಂದ ತೆರೆಯಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು) :

ಅ) ವಿಭಾಗೀಯ ಮಟ್ಟದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಕಛೇರಿಗಳನ್ನು ತೆರೆಯುವ ಪ್ರಸ್ತಾವನೆಯು ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಆ) ಇಲ್ಲ.

ಇ) ಪ್ರಶ್ನೆ (ಅ) ಹಾಗು (ಆ)ಗೆ ನೀಡಿದ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಬೀದರ್ ನಗರದ ಗಾಂಧಿಗಂಜ ರೈಲ್ವೆ ಗೇಟ್‌ನ್ನು ಯಾವಾಗಲೂ ತೆರೆಯದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆ.

2630 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ನಗರದ ಗಾಂಧಿಗಂಜ ರೈಲ್ವೆ ಗೇಟನ್ನು ಯಾವಾಗಲೂ ತೆರೆಯದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಗೇಟನ್ನು ತೆರೆಸಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದಿದೆಯೇ?

ಇ) ಹಾಗಿದ್ದಲ್ಲಿ, ಈ ರೈಲ್ವೆ ಗೇಟನ್ನು ಶೀಘ್ರವಾಗಿ ತೆರೆಸಲು ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ದಿನಾಂಕ 15-7-1989 ರಂದು ನಗರ ಸಭೆ, ಬೀದರ್ ಇವರು ರೈಲ್ವೆ ಇಲಾಖೆಗೆ ರೂ. 1,24,769 ಗಳನ್ನು ಅದೇ ಸ್ಥಾನದಲ್ಲಿ ಲೆವಲ್ ಕ್ರಾಸಿಂಗ್ ಬದಲಾಗಿ ರೈಲ್ವೆ ಅಂಡರ್ ಬ್ರಿಡ್ಜ್ ಕಟ್ಟುವ ಸಲುವಾಗಿ ಪಾವತಿ ಮಾಡಿದ್ದು ಇದೆ. ಆದರೆ ರೈಲ್ವೆ ಇಲಾಖೆಯು ರೂ. 5.54 ಲಕ್ಷಗಳನ್ನು ನೀಡಲು ಕೇಳಿದ್ದು, ಇದು ನಗರಸಭೆಯ ಶಕ್ತಿಗೆ ಮೀರಿದ್ದರಿಂದ ಈಗಾಗಲೇ ನೀಡಿದ್ದ ರೂ.1.24 ಲಕ್ಷಗಳಲ್ಲಿಯೇ ರೈಲ್ವೆ ಅಂಡರ್ ಬ್ರಿಡ್ಜ್ ಕಟ್ಟುವ ಕೆಲಸ ಮಾಡಲು ವಿನಂತಿಸಿದ್ದು, ಈ ಮಧ್ಯೆ ರೈಲ್ವೆ ಲೆವಲ್ ಕ್ರಾಸಿಂಗನ್ನು ಕೂಡಲೇ ತೆರೆಸುವಂತೆ ಸಹ ವಿನಂತಿಸಿದೆ.

ಅಬಕಾರಿ ಬಾಕಿಯಿರುವವರ ಸಂಖ್ಯೆ.

2718 - ಶ್ರೀ ಬಿ.ಪೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ರ ಅಬಕಾರಿ ಹರಾಜಿನಲ್ಲಿ ಪಡೆದವರ ಪೈಕಿ ಸರ್ಕಾರಕ್ಕೆ ಸಂದಾಯ ಮಾಡದೆ ಬಾಕಿ ಇರುವರ ಸಂಖ್ಯೆ ಎಷ್ಟು? ಹಾಗೂ ಅವರು ಒಟ್ಟು